# ಬೆಳ್ವೊಲನಾಡಿನ ಶಾಸನೋಕ್ತವಾಗಿದ್ದು ನಶಿಸಿರುವ ಬಸದಿಗಳು

**ಡಾ. ಶರಣಪ್ಪ ಬಸಪ್ಪ ಜಗ್ಗಲ**

ಇತಿಹಾಸ ಉಪನ್ಯಾಸಕರು

ಕೆ.ಎಲ್.ಇ ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಪದವಿ ಕಾಲೇಜು

ಹಾವೇರಿ–೫೮೧೧೧೦.

belvola300@gmail.com

Article Link: https://aksharasurya.com/2023/06/sharanappa-basappa-jaggal/


**ಪ್ರಸ್ತಾವನೆ:**

ಜೈನ ಪರಂಪರೆಯ ಗುಹಾಲಯ (ಲಯನ, ಕಲ್ಮನೆ), ಸ್ತೂಪ, ಬಸದಿ, ಮಾನಸ್ತಂಭ, ಬ್ರಹ್ಮಸ್ತಂಭ, ಧ್ವಜಸ್ತಂಭ, ಧರ್ಮಚಕ್ರಸ್ತಂಭ, ಬಲಿಪೀಠಗಳು ಇತ್ಯಾದಿ ವಾಸ್ತುಕಲೆಗೆ ಸಂಬಂಧಿಸಿದ ನಿರ್ಮಾಣಗಳು ಸಮಕಾಲೀನ ಜೈನ ಶಾಸ್ತ್ರ–ದರ್ಶನಗಳು, ತತ್ವ–ಸಿದ್ಧಾಂತಗಳು, ಆಚಾರ–ವಿಚಾರಗಳು, ನಂಬುಗೆ–ಸಂಪ್ರದಾಯಗಳನ್ನು ಮೈಗೂಡಿಸಿಕೊಂಡು ವಾಸ್ತುಶಾಸ್ತ್ರ ಮತ್ತು ಜೈನಾಗಮಗಳಲ್ಲಿ ನಿರೂಪಿತವಾದ ಸಲಹೆ–ಸೂಚನೆಗಳು, ನಿರ್ದೇಶನಗಳ ಹಿನ್ನೆಲೆಯಲ್ಲಿ ಮೂಡಿಬಂದಿವೆ. ಹೀಗಾಗಿ ಭಾರತೀಯ ವಾಸ್ತುಕಲೆಯ ಪ್ರಾರಂಭ, ಬೆಳವಣಿಗೆ, ವಿನ್ಯಾಸ, ಶೈಲಿ, ಲಕ್ಷಣ ಮೊದಲಾದವುಗಳ ಅಧ್ಯಯನದಲ್ಲಿ ಜೈನ ವಾಸ್ತುಕಲೆಗೆ ವಿಶೇಷವಾದ ಸ್ಥಾನವಿದೆ. ಜೈನ ಪರಂಪರೆಯಲ್ಲಿ ಅರಿಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧು, ಜಿನಧರ್ಮ, ಜಿನಾಗಮ, ಜಿನಚೈತ್ಯ, ಜಿನಚೈತ್ಯಾಲಯ ಎಂಬ ಒಂಭತ್ತು ಪ್ರಕಾರದ ಪೂಜ್ಯದೇವತೆಗಳನ್ನು 'ನವದೇವತೆಗಳು' ಎಂದು ಕರೆಯಲಾಗುತ್ತದೆ.[೧] ಈ ನವದೇವತೆಗಳಲ್ಲಿ 'ಜಿನಚೈತ್ಯಾಲಯ'ವೇ ಸ್ತೂಪ, ಗುಹಾಲಯ, ಬಸದಿ, ಮಾನಸ್ತಂಭಗಳು ಇತ್ಯಾದಿ ವಾಸ್ತು ನಿರ್ಮಾಣಗಳಿಗೆ ಪ್ರೇರಣೆಯಾಗಿದೆ. ಇದು ತೀರ್ಥಂಕರರು ಕೇವಲಜ್ಞಾನದ(ಜ್ಞಾನೋದಯ) ತರುವಾಯ ಸಕಲ ಜೀವಿಗಳನ್ನುದ್ದೇಶಿಸಿ ಪ್ರಥಮೋಪದೇಶ ಕೈಗೊಳ್ಳುವ ಸರ್ವತೋಭದ್ರ ರೀತಿಯ(ನಾಲ್ಕೂ ದಿಕ್ಕುಗಳಿಗೂ ಅಭಿಮುಖ) 'ಸಮವಸರಣ ಮಂಟಪ'ದ ಪ್ರತಿನಿಧಿಯಾಗಿದೆ.


ಜೈನ ನಿರ್ಮಾಣಗಳ ವಾಸ್ತುಕಲೆಯಲ್ಲಿ ಸಮವಸರಣ ಮಂಟಪದ ವಾಸ್ತುವಿನ್ಯಾಸ ಮತ್ತು ಲಕ್ಷಣಗಳು ಒಡಮೂಡಿರುವುದು ಇವುಗಳ ತಲಸ್ಪರ್ಶಿ ಅಧ್ಯಯನದಿಂದ ಖಚಿತವಾಗುತ್ತದೆ. ಬಸದಿಗಳು ಮತ್ತು ಇವುಗಳ ಸಂಕೀರ್ಣದಲ್ಲಿ ನಿರ್ಮಾಣವಾಗಿರುವ ಮಾನಸ್ತಂಭ, ಬ್ರಹ್ಮಸ್ತಂಭ, ಧ್ವಜಸ್ತಂಭ, ಧರ್ಮಚಕ್ರ ಸ್ತಂಭ, ಬಲಿಪೀಠ, ಭಟ್ಟಾರಕ ಆಯತನ(ಮಠಗಳು), ಸಭಾಭವನ, ಧರ್ಮಶಾಲೆ, ನಾಟ್ಯಶಾಲೆಗಳು ಮೊದಲಾದವುಗಳ ಪ್ರಾಚೀನತೆ, ಪರಿಕಲ್ಪನೆ, ನಿರ್ಮಾಣ, ವಾಸ್ತು ವೈವಿಧ್ಯ, ಶೈಲಿ, ವಿನ್ಯಾಸ, ಬೆಳವಣಿಗೆ ಮೊದಲಾದವುಗಳ ಅಧ್ಯಯನದ ದೃಷ್ಟಿಯಿಂದ ಕರ್ನಾಟಕವು ನಿಜಕ್ಕೂ ಪ್ರಯೋಗ ಶಾಲೆಯಾಗಿದೆ. 'ಸಮವಸರಣ ಮಂಟಪ'ದ ವಿವರಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಇದು ಒಂದು 'ಬಯಲು ಬಸದಿ'ಯಾಗಿ ಗೋಚರಿಸುತ್ತದೆ. ಜೊತೆಗೆ ಚೈತ್ಯಾಲಯದ ಕಲ್ಪನೆ ಅಕೃತ್ರಿಮದಿಂದ ಕೃತ್ರಿಮವಾಗಿ ಪರಿವರ್ತನೆಯಾದುದರ ಸೂಚನೆಯಂತೆ ಕಂಡುಬರುತ್ತದೆ. ಮಂಟಪ ನಿರ್ಮಾಣದ ಕೆಲವು ವಿವರಗಳಲ್ಲಿ ಪೌರಾಣಿಕ, ಅತಿಶಯ ಮತ್ತು ಅತಿರಂಜಿತವಾದ ಕಲ್ಪನೆಗಳಿದ್ದರೂ, ಭೌತಶಾಸ್ತ್ರದ ಹಿನ್ನೆಲೆಯಲ್ಲಿ ಇದನ್ನು ಪರಿಶೀಲಿಸಿದಾಗ, ಇದರ ಕೆಲವು ವಿವರಗಳು ಸತ್ಯಕ್ಕೆ ಸಮೀಪವಾಗಿರುವುದು ಸ್ಪಷ್ಟವಾಗುತ್ತವೆ. ಜೀವ, ಜಗತ್ತು, ದೇವರ ಕುರಿತಾದ ವಿಚಾರಗಳನ್ನು ಜನತೆಗೆ ತಿಳಿಸಲು ಮಾಡಿದ ಪ್ರಯತ್ನದ ಪ್ರತೀಕವಾಗಿ ಪ್ರಯೋಗ ರೂಪವಾಗಿ ಮೂಡಿಬಂದಿರುವ ಈ ಮಂಟಪದ ವಾಸ್ತುವಿನ್ಯಾಸದ ಚಿತ್ರಣವೇ ಬಸದಿಗಳ ವಾಸ್ತುಕಲೆಗೆ ಮತ್ತು ನಗರಗಳ ನಿರ್ಮಾಣ ಯೋಜನೆಗೆ ಸ್ಫೂರ್ತಿ–ಪ್ರೇರಣೆಯಾಗಿದೆ.[೨]

ಬೆಳ್ವೊಲನಾಡಿನ ಶಾಸನಗಳನ್ನು ಗಮನಿಸಿದಾಗ ರಾಜರು ನಾಲ್ಕು, ಸಾಮಂತರು ಏಳು, ಸ್ತ್ರೀಯರು ಹನ್ನೆರಡು, ದಂಡನಾಯಕರು ಐದು, ಗಾವುಂಡರು ಏಳು, ವರ್ತಕರು ಮೂರು ಹಾಗೂ ಸಾಮಾನ್ಯರು ಏಳು ಬಸದಿಗಳನ್ನು ನಿರ್ಮಿಸಿ ಆ ಬಸದಿಗಳಿಗೆ ಸ್ವಯಂ ಅಥವಾ ಅನ್ಯರ ಶ್ರೇಯಸ್ಸಿಗಾಗಿ ವರ್ಷದುದ್ದಕ್ಕೂ ಬಸದಿಯಲ್ಲಿ ದೀಪ ಬೆಳಗಿಸಲು, ಪಟ್ಟಬಂಧ ಮಹೋತ್ಸವದ ಸ್ಮರಣಾರ್ಥ ಜಿನಾಲಯದ ಅಂಗಭೋಗ ಮತ್ತು ರಂಗಭೋಗಗಳಿಗಾಗಿ, ಬಸದಿಗಳ ಜೀರ್ಣೋದ್ಧಾರಕ್ಕಾಗಿ, ಶನಿಕಾಟದ ಪರಿಹಾರಕ್ಕಾಗಿ ಬಸದಿಗೆ ಕಳಸಾರೋಹಣ, ಬಸದಿಗಳಲ್ಲಿರುವ ಮುನಿಗಳ ಆಹಾರಕ್ಕಾಗಿ ಹಾಗೂ ಬಸದಿಗಳಲ್ಲಿರುವ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಗ್ರಾಮದಾನ, ಭೂದಾನ, ಆಹಾರದಾನ, ದ್ರವ್ಯದಾನ, ದೀಪದಾನ, ವಸ್ತ್ರದಾನ, ಕೆರೆದಾನ, ಗೋಸಾಸದಾನ ಹಾಗೂ ಪುಸ್ತಕ ಇತ್ಯಾದಿ ದಾನಗಳನ್ನು

ಕೊಡಮಾಡಿದ್ದಾರೆ. ರಾಜರು, ಸಾಮಂತರು, ದಂಡನಾಯಕರು, ಗಾವುಂಡರು, ವರ್ತಕರು ಹಾಗೂ ಸಾಮಾನ್ಯರಿಗಿಂತ ಸ್ತ್ರೀಯರು ಬಸದಿಗಳ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಿರುವುದು ತುಂಬಾ ಮಹತ್ವದ ಸಂಗತಿಯಾಗಿದೆ.




ಬೆಳ್ವೊಲನಾಡಿನಲ್ಲಿ ಒಟ್ಟು ಐವತ್ತಾಲ್ಕು ಬಸದಿಗಳು ಕಂಡುಬರುತ್ತವೆ. ಅವುಗಳನ್ನು ಅಧ್ಯಯನದ ದೃಷ್ಟಿಯಿಂದ ಶಾಸನೋಕ್ತವಾಗಿದ್ದು ನಶಿಸಿರುವ ಬಸದಿಗಳು, ಶಾಸನೋಕ್ತವಾಗಿದ್ದು ಅವಶೇಷವಾಗಿ ಉಳಿದಿರುವ ಬಸದಿಗಳು, ಶಾಸನೋಕ್ತವಾಗಿದ್ದು ಉಳಿದು ಬಂದಿರುವ ಬಸದಿಗಳು, ಶಾಸನಾಧಾರವಿರದ ಬಸದಿಗಳು ಹಾಗೂ ಪರಿವರ್ತಿತಗೊಂಡ ಬಸದಿಗಳು ಎಂದು ವಿಂಗಡಿಸಲಾಗಿದೆ. ಇವುಗಳಲ್ಲಿ ನಶಿಸಿರುವ ಬಸದಿಗಳ ಪ್ರಮಾಣ ಹೆಚ್ಚಾಗಿದೆ. ಶಾಸನಗಳಲ್ಲಿ ಮಾತ್ರ ಅವುಗಳು ಕಂಡುಬರುತ್ತವೆ. ಆದರೆ ಆ ಬಸದಿಗಳು ಇಂದು ಉಳಿದು ಬಂದಿಲ್ಲ. ಐದು ಬಸದಿಗಳು ಶಾಸನೋಕ್ತವಾಗಿದ್ದು, ಕೇವಲ ಆ ಬಸದಿಗಳ ಅವಶೇಷಗಳು ಮಾತ್ರ ಕಂಡುಬಂದಿವೆ. ಜೈನವಾಸ್ತು ಕಲೆಯ ಅಧ್ಯಯನಕ್ಕೆ ಮಹತ್ವವಾದ ಐದು ಬಸದಿಗಳು ಮಾತ್ರ ಕಂಡುಬಂದಿವೆ. ಇನ್ನುಳಿದಂತೆ ಮೂರು ಶಾಸನಾಧಾರವಿರದ ಬಸದಿಗಳು ಉತ್ತಮವಾದ ವಾಸ್ತು ವೈಶಿಷ್ಟ್ಯತೆಗಳಿಂದ ಕೂಡಿವೆ. ಎಂಟು ಬಸದಿಗಳು ಯಾವುದೋ ಒಂದು ಕಾಲಘಟ್ಟದಲ್ಲಿ ಅನ್ಯ ಧರ್ಮದ ದೇವಾಲಯಗಳಾಗಿ ಪರಿವರ್ತಿತಗೊಂಡಿವೆ. ಅಲ್ಲಿರುವ ಜೈನ ವಾಸ್ತು ಅವಶೇಷಗಳಿಂದ ಮತ್ತು ಶಾಸನಗಳಿಂದ ಅದು ಮೂಲತಃ ಬಸದಿಯಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.




ಬೆಳ್ವೊಲನಾಡಿನ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಮತ್ತು ಇತರೆಡೆಯ ಶಾಸನಗಳಲ್ಲಿ ನಿರೂಪಿತವಾಗಿರುವ ಇಲ್ಲಿಯ ಬಸದಿಗಳ ನಿರ್ಮಾತೃರು, ಕಾಲಮಾನ, ದಾನ–ದತ್ತಿಗಳು, ವಾಸ್ತು ಲಕ್ಷಣಗಳು/ವೈಶಿಷ್ಟ್ಯತೆಗಳು ಇತ್ಯಾದಿ ವಿವರಗಳು ಈ ಕೆಳಗಿನಂತಿವೆ.

**ಶಾಸನೋಕ್ತವಾಗಿದ್ದು ನಶಿಸಿರುವ ಬಸದಿಗಳು:** ಬೆಳ್ವೊಲನಾಡಿನ ಶಾಸನಗಳನ್ನು ಗಮನಿಸಿದಾಗ ಕೇವಲ ಶಾಸನಗಳಲ್ಲಿ ಮಾತ್ರ ಬಸದಿ, ಜಿನಾಲಯ, ಚೇದಿ ಎಂಬ ಪದಗಳು ಕಂಡುಬರುತ್ತವೆ. ಒಂದು ಕಾಲಘಟ್ಟದಲ್ಲಿ ಭವ್ಯವಾಗಿದ್ದ ಬಸದಿಗಳು ಇಂದು ಕೇವಲ ಶಾಸನದಲ್ಲಿ ಮಾತ್ರ ನೋಡಬಹುದಾಗಿದೆ. ಅವುಗಳು ಯಾವುದೋ ಕಾಲಘಟ್ಟದಲ್ಲಿ ಸಮೂಲನಾಶವಾಗಿವೆ. ಅಂತಹ ಶಾಸನೋಕ್ತವಾದ ಬಸದಿಗಳ ನಿರ್ಮಾತೃರು, ಕಾಲಮಾನ, ದಾನ–ದತ್ತಿಗಳು ಹಾಗೂ ಜೀರ್ಣೋದ್ಧಾರ ಇತ್ಯಾದಿ ವಿವರಗಳು ಈ ಕೆಳಗಿನಂತಿವೆ.

**ಹೂಲಿಯ ಶಾಂತಿನಾಥ ಬಸದಿ:** ಹೂಲಿಯ ಕ್ರಿ.ಶ. ೬ನೆಯ ಶತಮಾನದ ತಾಮ್ರಪಟ ಶಾಸನವು ಬಾದಾಮಿ ಚಾಲುಕ್ಯರ ರಾಜ ಮಂಗಳೇಶನ ಆಳ್ವಿಕೆಯ ಕಾಲಾವಧಿಯಲ್ಲಿ ಕಿರುವತ್ತಿ ಕೆರೆಯ ಐವತ್ತು ನಿವರ್ತನ ಭೂಮಿಯನ್ನು ಹೂಲಿಯ ಶಾಂತಿನಾಥ ತೀರ್ಥಂಕರರಿಗೆ ಮಂಗಳೇಶನ ಅಪ್ಪಣೆಯ ಪ್ರಕಾರ ದತ್ತಿ ಬಿಟ್ಟ ಸಂಗತಿಯನ್ನು ತಿಳಿಸುತ್ತದೆ. ಸೇಂದ್ರಕ ಕುಲದ ರವಿಶಕ್ತಿಯ ಮಗ ಕನ್ನಶಕ್ತಿಯು ಈ ಕಿರುವತ್ತಿ ಕೆರೆಯ

ಒಡೆಯನಾಗಿದ್ದು, ಈ ದಾನವನ್ನು ಪರಲೂರು ಸಂಘದ ಶ್ರೀನಂದ್ಯಾಚಾರ್ಯರ ಶಿಷ್ಯ ಅಭಯನಂದಿ ಆಚಾರ್ಯರಿಗೆ ಒಪ್ಪಿಸಿದ್ದಾನೆ.[೪]

**ಅಣ್ಣಿಗೇರಿಯ ಚೇದಿ (ಬಸದಿ):** ಬಾದಾಮಿ ಚಾಲುಕ್ಯರ ಇಮ್ಮಡಿ ಕೀರ್ತಿವರ್ಮನ ಕಾಲಾವಧಿಯಲ್ಲಿ ಜೇಬುಳಗೇರಿಯಲ್ಲಿ ಗಾವುಂಡಗೈಯುತ್ತಿದ್ದ ಕಲಿಯಮ್ಮನು ಚೇದಿಯನ್ನು ಮಾಡಿಸಿದ ನಿರೂಪಣೆಯನ್ನು ಕ್ರಿ.ಶ. ೭೫೧-೫೨ರ ಶಾಸನವು ದಾಖಲಿಸುತ್ತದೆ.[೫] ಚೇದಿ/ಚೈತ್ಯ/ಚೈತ್ಯಾಲಯ ಎಂದರೆ ಬಸದಿ ಎಂದರ್ಥ.

**ಅಸುಂಡಿಯ ಧೋರ ಜಿನಾಲಯ:** ಗದಗ ತಾಲೂಕು ಅಸುಂಡಿಯ ಉಡಚಮ್ಮನ ದೇವಾಲಯದ ಹಿಂದೆ ಕ್ರಿ.ಶ. ೯೨೫ರ ರಾಷ್ಟ್ರಕೂಟ ಅರಸ ನಾಲ್ಕನೆಯ ಗೋವಿಂದನ ಕಾಲದ ಶಾಸನದಲ್ಲಿ ಧೋರ ಜಿನಾಲಯದ ಮುಖ್ಯಸ್ಥನಾಗಿದ್ದ ಚಂದ್ರಪ್ರಭಭಟ್ಟನು ಪಸಲುಮಡಿ(ಅಸುಂಡಿ)ಯನ್ನು ಆಳುವಾಗ 'ನಾಗಯ್ಯ' ಎಂಬುವನು ಈ ಬಸದಿಗೆ ಭೂದಾನ ಮಾಡಿದ ಕುರಿತು ಪ್ರಸ್ತಾಪಿಸಲಾಗಿದೆ.[೬]

**ಅಣ್ಣಿಗೇರಿಯ ಪಾರ್ಶ್ವನಾಗಾರ್ಜುನ ಜಿನಾಲಯ:** ಕ್ರಿ.ಶ. ೯೬೮ರ ಲಕ್ಷ್ಮೇಶ್ವರದ ಶಾಸನದಲ್ಲಿ ಕದಂಬರ ರವಿವರ್ಮನ (ರವಿರಾಜ?) ಪ್ರಿಯಮೈದುನನಾದ ಸೇಂದ್ರಕರ ಅರಸನೊಬ್ಬನು(ಹೆಸರು ತೃಟಿತವಾಗಿದೆ) ರಾಜಗುರು ಭೂವನನಂದ್ಯಾಚಾರ್ಯನ ಸದ್ಧರ್ಮೋಪದೇಶದಿಂದ ಪ್ರೇರಿತನಾಗಿ ಅಣ್ಣಿಗೇರಿಯ ಪಾರ್ಶ್ವನಾಗಾರ್ಜುನ ಜಿನಾಲಯದ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ದೇವಗಣ ಪರಂಪರೆಯ ಮಹೇಂದ್ರದೇವ ಭಟ್ಟಾರಕನ ಪಾದಗಳನ್ನು ತೊಳೆದು ಸರ್ವಬಾಧಾ ಪರಿಹಾರವಾಗಿ ಭೂದಾನ ಮಾಡಿದ ವಿವರವಿದೆ.[೭] ಇದರಿಂದ ಅಣ್ಣಿಗೇರಿಯಲ್ಲಿ ಕ್ರಿ.ಶ. ಸುಮಾರು ೯-೧೦ನೆಯ ಶತಮಾನದಲ್ಲಿ ಪಾರ್ಶ್ವನಾಥನ ಬಸದಿ ಇತ್ತೆಂಬುದು ಸ್ಪಷ್ಟವಾಗುತ್ತದೆ.[೮]

**ಮಲ್ಲಸಮುದ್ರದ ಕಮ್ಮದವಟ್ಟಿ ಬಸದಿ:** ಗದಗ ಜಿಲ್ಲೆಯ ಗದಗ ತಾಲೂಕಿನ ಮಲ್ಲಸಮುದ್ರದಲ್ಲಿರುವ ಕ್ರಿ.ಶ. ಸುಮಾರು ೯ನೆಯ ಶತಮಾನದ ಮಹಾವೀರನ ಶಿಲ್ಪದ ಪಾದಪೀಠ ಶಾಸನದಲ್ಲಿ "ಶಂಖ ಜಿನಾಲಯಕ್ಕೆ ಪ್ರತಿಬದ್ಧವಾಗಿದ್ದ ಕಮ್ಮದವಟ್ಟಿಯ ದೇಹಾರಕ್ಕೆ(ಬಸದಿ) ಕಂತಿಯರ ಬಲ್ಲಿಮಯ್ಯನು ಈ ಶಿಲ್ಪವನ್ನು ಮಾಡಿಸಿ ಕೊಟ್ಟನು" ಎಂದು ಪ್ರಸ್ತಾಪವಿದೆ.[೯] ಇದರಿಂದ ಈ ಗ್ರಾಮದಲ್ಲಿನ ಕಮ್ಮದವಟ್ಟಿ ಬಸದಿಯು ಲಕ್ಷ್ಮೇಶ್ವರದ ಶಂಖ ಬಸದಿಗೆ (ನೇಮಿನಾಥ ಬಸದಿ) ಪ್ರತಿಬದ್ಧವಾಗಿದ್ದಿತ್ತೆಂದು ಸ್ಪಷ್ಟವಾಗುತ್ತದೆ.

**ಲಕ್ಕುಂಡಿಯ ತೋಂಟದ ಘಟಾಂತಿಕೆಯ ಬಸದಿ (ಪದ್ಮಾವತಿ ಬಸದಿ):** ಗದಗ ತಾಲೂಕಿನ ಲಕ್ಕುಂಡಿಯ ಪ್ರಾಚ್ಯವಸ್ತು ಸಂಗ್ರಹಾಲಯದ ಮುಂಭಾಗದಲ್ಲಿರುವ ಕಲ್ಯಾಣ ಚಾಲುಕ್ಯರ ಆಹವಮಲ್ಲದೇವ ಇರಿವಬೆಡಂಗ ಸತ್ಯಾಶ್ರಯನ ಕ್ರಿ.ಶ. ೧೦೦೭ರ ಶಾಸನದಲ್ಲಿ 'ದಾನಚಿಂತಾಮಣಿ ಅತ್ತಿಮಬ್ಬೆ ಲಕ್ಕುಂಡಿಯಲ್ಲಿ ಮಾಡಿಸಿದ ಆದಿನಾಥ ಬಸದಿಗೆ ಪ್ರತಿಬದ್ಧವಾದ (ಅಧೀನವಾದ) ತೋಂಟದ ಘಟಾಂತಿಕೆಯ ಬಸದಿಯ ಪಾರ್ಶ್ವನಾಥ ದೇವರಿಗೆ ಮುನ್ನೂರು ಪುಷ್ಪಗಳು ಸಲ್ಲಬೇಕು, ಈ ತೋಟವನ್ನು ಯಾರು ನೋಡಿಕೊಳ್ಳುತ್ತಾರೋ ಅವರು ಪುಷ್ಪಗಳನ್ನು ಸಲ್ಲಿಸುತ್ತ ನಡೆಯಬೇಕು' ಎಂಬ ನಿರೂಪಣೆಯಿದೆ.[೧೦] ಇದರಿಂದ ಲಕ್ಕುಂಡಿಯಲ್ಲಿ ತೋಂಟದ ಘಟಾಂತಿಕೆಯ ಬಸದಿ ಇತ್ತೆಂಬುದು ಸ್ಪಷ್ಟವಾಗುತ್ತದೆ.

**ಬ್ಯಾಹಟ್ಟಿಯ ಬಸದಿ:** ಹುಬ್ಬಳ್ಳಿ ತಾಲೂಕಿನ ಬ್ಯಾಹಟ್ಟಿ ಗ್ರಾಮದ ಕ್ರಿ.ಶ. ೧೦೨೭ರ ಕಲ್ಯಾಣ ಚಾಲುಕ್ಯರ ಇಮ್ಮಡಿ ಜಯಸಿಂಹನ ಶಾಸನವಿದೆ. ಇದರಲ್ಲಿ ವಾಮನರಸ ಮತ್ತು ಹನ್ನೆರಡು ಗಾವುಂಡರು ಬಸದಿಗೆ ತೆರಿಗೆಯನ್ನು ದಾನ ಮಾಡಿದ ನಿರೂಪಣೆಯಿದೆ.[೧೧] ಸ್ಥಳೀಯ ಜಾಡಗೇರಿಯಲ್ಲಿರುವ ಸಿದ್ದೇಶ್ವರ ದೇವಾಲಯದ ಸ್ಥಳದಲ್ಲಿಯೇ ಈ ಶಾಸನೋಕ್ತ ಬಸದಿಯಿತ್ತು. ಅದು ಯಾವುದೋ ಕಾಲಘಟ್ಟದಲ್ಲಿ ಸಮೂಲನಾಶವಾಗಿದೆ.

**ಮುಳಗುಂದದ ತೀರ್ಥದ ಬಸದಿ:** ಗದಗ ತಾಲೂಕಿನ ಮುಳಗುಂದದ ಕಲ್ಯಾಣ ಚಾಲುಕ್ಯರ ೧ನೆಯ ಸೋಮೇಶ್ವರನ ಆಳ್ವಿಕೆಯ ಕಾಲಾವಧಿಯ ಕ್ರಿ.ಶ. ೧೦೫೦ರ ಶಾಸನದಲ್ಲಿ ಚಂದ್ರಪ್ರಭನಾಥ ಬಸದಿಯ ದೇವರ ಚರುಗಿಗೆ (ಅಷ್ಟವಿಧ ಅರ್ಚನೆಗಳ ಪದಾರ್ಥಗಳಲ್ಲಿ ಒಂದು) ಮುಳಗುಂದದ ತೀರ್ತ್ಥದ ಬಸದಿಯ ತಳದೊಳಗೆ ಚಿಂಚಿಲದ (ಇಂದಿನ ಚಿಂಚಲಿ) ಬೆಟ್ಟದಿಂದ ಪೂರ್ವಕ್ಕೆ ನಗರೇಶ್ವರದ ಗಡಿಂಬ ಕೋಲಿನಲ್ಲಿ ಅಳೆದು ಇಪ್ಪತ್ನಾಲ್ಕು ಮತ್ತರು ಭೂಮಿಯನ್ನು ದಾನ ಮಾಡಿದ ಪ್ರಸ್ತಾಪವಿದೆ.[೧೨]

**ಅಣ್ಣಿಗೇರಿಯ ಆದಿನಾಥ ಬಸದಿ:** ಅಣ್ಣಿಗೇರಿಯ ಕ್ರಿ.ಶ. ೧೦೭೧–೭೨ರ ಶಾಸನದಲ್ಲಿ "ಚಂದವ್ವೆಯ ಮಗನಾದ ಹೆಗ್ಗಡೆ ಮಲ್ಲಯ್ಯನು ಆದಿನಾಥ ಬಸದಿಯ ಆಚಾರ್ಯರ ಸೇವೆಯನ್ನು ಮಾಡುತ್ತ, ಹನ್ನೆರಡು ಮತ್ತರು ಭೂಮಿ ಮತ್ತು ಒಂದು ಮನೆಯನ್ನು ದಾನ ಮಾಡಿದನು" ಎಂದು ವಿವರವಿದೆ.[೧೩] ಈ ವಿವರವು ಗದಗ ತಾಲೂಕಿನ

ಗಾವರವಾಡದ ಕ್ರಿ.ಶ. ೧೦೭೧–೭೨ರ ಶಾಸನದಲ್ಲಿಯೂ ದಾಖಲಾಗಿದೆ.[೧೪] ಇದರಿಂದ ಅಣ್ಣಿಗೇರಿಯಲ್ಲಿ ಆದಿನಾಥ ಬಸದಿ ಇತ್ತೆಂಬುದು ಸ್ಪಷ್ಟವಾಗುತ್ತದೆ.

**ಅಣ್ಣಿಗೇರಿಯ ಸೇನಗಣದ ಬಸದಿ:** ಕ್ರಿ.ಶ. ೧೦೭೧–೭೨ರ ಅಣ್ಣಿಗೇರಿಯ ಶಾಸನದಲ್ಲಿ "ಕೇತಗಾವುಂಡನು ತನ್ನ ಮನೆದೇವರಾದ ಸೇನಗಣದ ಬಸದಿಯ ಆಚಾರ್ಯರ ಪಾದಗಳನ್ನು ತೊಳೆದು ಹೂಲಿಗೊಳದ ಸೀಮೆಯಿಂದ ಕುಳುಪಳ್ಳದ ಪಶ್ಚಿಮ ಭಾಗದಲ್ಲಿ ಎಂಟು ಮತ್ತರು ಭೂಮಿ ಮತ್ತು ನಾಲ್ಕು ಅರುವಣ ಗದ್ಯಾಣಗಳನ್ನು ದಾನ ಮಾಡಿದನು" ಎಂದು ದಾಖಲಾಗಿದೆ.[೧೫] ಈ ವಿವರವು ಗದಗ ತಾಲೂಕಿನ ಗಾವರವಾಡದ ಕ್ರಿ.ಶ. ೧೦೭೧–೭೨ರ ಶಾಸನದಲ್ಲಿಯೂ ನಿರೂಪಿತವಾಗಿದೆ.[೧೬] ಇದರಿಂದ ಅಣ್ಣಿಗೇರಿಯಲ್ಲಿ ಸೇನಗಣ ಪರಂಪರೆಯ ಬಸದಿ ಇತ್ತೆಂಬುದು ಸ್ಪಷ್ಟವಾಗುತ್ತದೆ.

**ಬೆಟಗೇರಿಯ ಕಲಿದೇವಸ್ವಾಮಿ ಬಸದಿ:** ಅಣ್ಣಿಗೇರಿಯ ಕ್ರಿ.ಶ. ೧೦೭೧–೭೨ರ ಶಾಸನದಲ್ಲಿ "ಮಹಾಪ್ರಧಾನ ವಸುಧೈಕ್ಯಬಾಂಧವ ರೇಚಿದೇವ ದಂಡನಾಯಕನು ಬಟ್ಟಕೆರೆಯ ಕಲಿದೇವಸ್ವಾಮಿ ಜಿನನ (ಆದಿನಾಥ ತೀರ್ಥಂಕರ) ಪಾದಾರ್ಚನೆಗೆ ಮತ್ತು ಕರ್ಪೂರ, ಕುಂಕುಮ, ಶ್ರೀಗಂಧ ಸಹಿತವಾಗಿ ಅಷ್ಟವಿಧಾರ್ಚನೆಗೆ ಹನ್ನೆರಡು ಮತ್ತರು ಭೂಮಿಯನ್ನು ದಾನ ಮಾಡಿದನು" ಎಂದು ಪ್ರಸ್ತಾಪವಿದೆ.[೧೭] ಈ ವಿವರವು ಗದಗ ತಾಲೂಕಿನ ಗಾವರವಾಡದ ಕ್ರಿ.ಶ. ೧೦೭೧–೭೨ರ ಶಾಸನದಲ್ಲಿಯೂ ದಾಖಲಾಗಿದೆ.[೧೮]

**ಸೋಮಾಪುರದ ಮೆಕ್ಕಿಗೇರಿ ಬಸದಿ:** ಗದಗ ಜಿಲ್ಲೆಯ ನರಗುಂದ ತಾಲೂಕಿನ ಸೋಮಾಪುರದ ಕ್ರಿ.ಶ. ೧೦೭೪ರ ಶಾಸನವು ಚಾಲುಕ್ಯ ಭುವನೈಕಮಲ್ಲದೇವನ ಮಹಾಮಂಡಳೇಶ್ವರನಾದ ಮಾರಸಿಂಹನು ಕೊಂಡಿ ಮೂರು ಸಾವಿರವನ್ನು ಆಳುತ್ತಿದ್ದ ಸಂದರ್ಭದಲ್ಲಿ ಈ ಗ್ರಾಮದಲ್ಲಿ ಬಸದಿಯನ್ನು ನಿರ್ಮಿಸಿದನು. ಆ ಬಸದಿಯ ಜೀರ್ಣೋದ್ಧಾರಕ್ಕಾಗಿ ಗ್ರಾಮದ ತೆಂಕಣ ದಿಕ್ಕಿಗಿರುವ ಹನ್ನೆರಡು ಮತ್ತರು ಭೂಮಿಯನ್ನು ಮತ್ತು ಒಂದು ಮನೆಯನ್ನು ಮಹಾಜನರ ಸಮ್ಮುಖದಲ್ಲಿ ದಾನ ನೀಡಿದ ಮಾಹಿತಿಯನ್ನು ದಾಖಲಿಸುತ್ತದೆ.[೧೯]

**ಜಕ್ಕಲಿ ಜಿನಾಲಯ:** ರೋಣ ತಾಲೂಕಿನ ಜಕ್ಕಲಿಯ ಕ್ರಿ.ಶ. ೧೦೭೭ರ ಶಾಸನದಲ್ಲಿ ಜಿನಾಲಯದ ಉಲ್ಲೇಖವಿದೆ.[೨೦] ಈ ಶಾಸನದಲ್ಲಿ ಜಿನಾಲಯ, ಜೀನೇಂದ್ರ ಎಂಬ ಪದಗಳ ಉಲ್ಲೇಖ ಕಂಡುಬರುವುದರಿಂದ ಈ ಗ್ರಾಮದಲ್ಲಿದ್ದ ಜಿನಾಲಯಕ್ಕೆ ದಾನ ನೀಡಿದಂತೆ ಕಾಣುತ್ತದೆ.

**ಸಿರಸಂಗಿಯ ಬಸದಿ:** ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಸಿರಸಂಗಿಯ ಕ್ರಿ.ಶ. ೧೦೭೯ರ ಶಾಸನವೊಂದರಲ್ಲಿ ಬಾಚಿಗಾವುಂಡನು ಬಸದಿಯನ್ನು ನಿರ್ಮಿಸಿದ್ದು, ಅತಿಮಬ್ಬೆ ಮತ್ತು ಕಾಳದೇವ ಸೆಟ್ಟಿಯು ಎಣ್ಣೆಗಾಣ ಮತ್ತು ಮತ್ತರನ್ನು ಬಸದಿಯ ಆಚಾರ್ಯರಾದ ಗಂಡವಿಮುಕ್ತ ಸಿದ್ಧಾಂತದೇವರ ಪಾದ ಪೂಜೆ ಮಾಡಿ ದಾನ ನೀಡಿದರೆಂದು ದಾಖಲಾಗಿದೆ.[೨೧]

**ಕುರಹಟ್ಟಿಯ ಹಡುವಣ ಬಸದಿ:** ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಕುರಹಟ್ಟಿಯ ಕ್ರಿ.ಶ. ೧೧೪೨ ಎರಡನೆಯ ಜಗದೇಕಮಲ್ಲನ ಶಾಸನದಲ್ಲಿ "ಮತ್ತೆ ಮಾಳಪಯ್ಯನಾಯಕರು ಮುಂಚೆ ಮಾಡಿದ ಧರ್ಮ ಕಾರ್ಯಗಳಿಗೆ ಮತ್ತು ಹಡುವಣ ಬಸದಿಗೆ ಇಪ್ಪತ್ತು ಹೊಸಲೊಕ್ಕಿಗದ್ಯಾಣವನ್ನು" ದಾನ ನೀಡಿದ ಮಾಹಿತಿಯನ್ನು ನಿರೂಪಿಸುತ್ತದೆ.[೨೨] ಇಲ್ಲಿ ಉಲ್ಲೇಖಿತವಾದ ಬಸದಿಯು ಈ ಗ್ರಾಮದ ಪಡುವಣ ದಿಕ್ಕಿಗೆ ಇರುವುದೆಂದೊ ಅಥವಾ ಈ ಬಸದಿಯ ಹೆಸರೇ ಹಡುವಣ ಬಸದಿಯೊ ಎಂಬುದು ಸ್ಪಷ್ಟವಾಗಿ ತಿಳಿದುಬಂದಿಲ್ಲ.

**ಚಿಕ್ಕಹಂದಿಗೋಳದ ಘಟಾಂತಿಕಿ ಬಸದಿ:** ಗದಗ ತಾಲೂಕಿನ ಚಿಕ್ಕಹಂದಿಗೋಳ ಗ್ರಾಮದ ಕ್ರಿ.ಶ. ೧೧೭೪ರ ಶಾಸನದಲ್ಲಿ ಮೂಲಸಂಘದ ದೇವಗಣ ಪರಂಪರೆಯ ಬಾಹುಬಲಿ ಯತೀಶ್ವರರು ನಿರ್ಮಿಸಿದ ಘಟಾಂತಿಕ ಜಿನಸ್ಥಾನವೆಂಬ ಬಸದಿಗೆ ಭೂಮಿ ಹಾಗೂ ಎಣ್ಣೆಗಾಣವನ್ನು ದಾನ ನೀಡಿದ ವಿವರವಿದೆ. ಲಕ್ಷ್ಮೇಶ್ವರದ ಶಂಖ ಜಿನಾಲಯದ ಆಚಾರ್ಯರಾದ ಕಮಲಾದೇವಿಚಾರ್ಯರ ಶಿಷ್ಯ ಬಾಹುಬಲಿ ಯತೀಶ್ವರರಿಗೆ ಹಂದಿಗೋಳದ ಅರವತ್ನಾಲ್ಕು ಮಹಾಜನರು ಆ ಬಸದಿಯ ಅಷ್ಟವಿಧಾರ್ಚನೆಗೆ ಮತ್ತು ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ದಾನ ನೀಡಿರುವ ವಿಚಾರವನ್ನು ಈ ಶಾಸನ ನಿರೂಪಿಸುತ್ತದೆ.[೨೩] ಇದರಿಂದ ಈ ಗ್ರಾಮದಲ್ಲಿ 'ಘಟಾಂತಕಿ' ಎಂಬ ಹೆಸರಿನ ಬಸದಿ ಇತ್ತೆಂಬುದು ಖಚಿತವಾಗುತ್ತದೆ.

**ಅಣ್ಣಿಗೇರಿಯ ಪಂಚವಸದಿ (ಪಂಚಬಸದಿ):** ಅಣ್ಣಿಗೇರಿಯ ಕ್ರಿ.ಶ. ೧೧೮೪ರ ಶಾಸನದಲ್ಲಿ, ವೀರಬ್ರಹ್ಮೇಶ್ವರ ದೇವಾಲಯಕ್ಕೆ ದಾನ ಮಾಡಿದ ಭೂಮಿಯ ಸೀಮಾ ವಿವರಗಳಲ್ಲಿ ಪಂಚವಸದಿಯ (ಪಂಚಬಸದಿ>ಪಂಚಕೂಟಾಚಲ ಬಸದಿ) ಉಲ್ಲೇಖವಿದೆ.[೨೪] ಇದರಿಂದ ಅಣ್ಣಿಗೇರಿಯಲ್ಲಿ ಪಂಚಕೂಟ ತಲವಿನ್ಯಾಸದ ಬಸದಿ ಇತ್ತೆಂಬುದು ಮನದಟ್ಟಾಗುತ್ತದೆ.

**ಲಕ್ಕುಂಡಿಯ ಕಮ್ಮಟ ಜಿನಾಲಯ (ಶಾಂತಿನಾಥ ಬಸದಿ):** ಲಕ್ಕುಂಡಿಯ ಹೆಣ್ಣು ಮಕ್ಕಳ ಶಾಲೆಯ ಹತ್ತಿರದ ಗಣೇಶ ದೇವಾಲಯದಲ್ಲಿರುವ ಕಲ್ಯಾಣದ ಚಾಲುಕ್ಯರ ತ್ರಿಭುವನಮಲ್ಲ ವೀರಸೋಮೇಶ್ವರನ ಕ್ರಿ.ಶ. ೧೧೮೫ರ ಶಾಸನದಲ್ಲಿ 'ಕಲ್ಯಾಣ ಚಾಲುಕ್ಯರ ತ್ರಿಭುವನಮಲ್ಲ ವೀರಸೋಮೇಶ್ವರದೇವನ ಆಳ್ವಿಕೆಯ ಸಂದರ್ಭದಲ್ಲಿ, ಲೊಕ್ಕಿಗುಂಡಿಯ ಅಶೇಷ ಕೊತ್ತಳಿಗಳು (ಬೇರೆ ಬೇರೆ ಉದ್ಯೋಗದವರ ಸಂಘದ ಸದಸ್ಯರು) ಮುಖ್ಯವಾಗಿ ಕೇಶವದೇವರ ಮಾದಿವೋಜ, ದೇವೋಜ, ಕಮ್ಮಟದ ಹಿರಿಯ ಕೇತೋಜ, ರುದ್ಧೋಜ, ರಾಮೋಜ, ನಾಗೀಂದ್ರ ಕೇಶವದೇವರ ರೂವಾರಿ ಗಣಪೋಜ, ಶಾಂತಿನಾಥ ದೇವರ ಓಜ ಸೋವೋಜ, ದಾಳಿಸೆಟ್ಟಿಯ ಬಮ್ಮೋಜ, ಆಯಿಸೆಟ್ಟಿಯರ ಜಿನ್ನೋಜ ಮೊದಲಾದ ಹಲವು ಓಜರು ಕೂಡಿಕೊಂಡು ಕಮ್ಮಟ ಜಿನಾಲಯದ ಶಾಂತಿನಾಥ ದೇವರಿಗೆ ಹಣವನ್ನು (ಮೂರು ಹಾಗ, ಎರಡು ಬೇಳೆ) ದಾನ ಮಾಡಿದರು' ಎಂಬ ನಿರೂಪಣೆಯಿದೆ.[೨೫] ಇದರಿಂದ ಲಕ್ಕುಂಡಿಯಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ಕಮ್ಮಟ ಶಾಂತಿನಾಥನ ಬಸದಿ ಇತ್ತೆಂಬುದು ಸ್ಪಷ್ಟವಾಗುತ್ತದೆ.

**ಲಕ್ಕುಂಡಿಯ ನೋಂಪಿಯ ಬಸದಿ:** ಗದಗ ತಾಲೂಕಿನ ಲಕ್ಕುಂಡಿಯ ಹೆಣ್ಣು ಮಕ್ಕಳ ಶಾಲೆಯ ಹತ್ತಿರದ ಗಣೇಶ ದೇವಾಲಯದಲ್ಲಿರುವ ಕಲ್ಯಾಣ ಚಾಲುಕ್ಯರ ತ್ರಿಭುವನಮಲ್ಲ ವೀರಸೋಮೇಶ್ವರನ ಕ್ರಿ.ಶ. ೧೧೮೫ರ ಶಾಸನದಲ್ಲಿ 'ಕಲ್ಯಾಣ ಚಾಲುಕ್ಯರ ತ್ರಿಭುವನಮಲ್ಲ ವೀರಸೋಮೇಶ್ವರದೇವನ (೪ನೆಯ ಸೋಮೇಶ್ವರ) ಆಳ್ವಿಕೆಯ ಸಂದರ್ಭದಲ್ಲಿ, ಲಕ್ಕುಂಡಿಯ ಊರೊಡೆಯ ಪ್ರಮುಖರ (ಮಹಾಜನರು) ಸನ್ನಿಧಾನದಲ್ಲಿ (ಉಪಸ್ಥಿತಿಯಲ್ಲಿ), ಅಚ್ಚಿನ ಮೊಳೆಯ ಕೇಣಿಕಾರ ವಿಷ್ಣುಸೆಟ್ಟಿ (ಗುತ್ತಿಗೆದಾರರ ಸಂಘದ ಸದಸ್ಯ ಅಥವಾ ಮುಖ್ಯಸ್ಥ) ನೋಂಪಿಯ ಬಸದಿಯ ದೇವರ ಅಷ್ಟವಿಧಾರ್ಚನೆಗೆ ಐದು ಹಣಗಳನ್ನು, ಹನ್ನಿರ್ವರು (ವ್ಯಾಪಾರಿಗಳು) ಅಜ್ಜಿಯ (ಜೈನ ಸನ್ಯಾಸಿನಿ) ವಸ್ತ್ರದಾನಕ್ಕೆ ಪ್ರತಿವರ್ಷ ಒಂದು ಹಣವನ್ನು, ಬೆಳ್ಳಿ ಗಮ್ಮಟದವರು ಅಜ್ಜಿಯ ವಸ್ತ್ರದಾನಕ್ಕೆ ತಮ್ಮ ಕಮ್ಮಟದಿಂದ ಒಂದು ಪಣವನ್ನು ದಾನ ಮಾಡಿದರು' ಎಂಬ ನಿರೂಪಣೆಯಿದೆ.[೨೬] ಇದರಿಂದ ಲಕ್ಕುಂಡಿಯಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ನೋಂಪಿಯ ಬಸದಿ ಇತ್ತೆಂಬುದು ಸ್ಪಷ್ಟವಾಗುತ್ತದೆ.

**ನವಲಗುಂದದ ತ್ರಿಭುವನತಿಳಕ ಬಸದಿ:** ಗದುಗಿನ ಕ್ರಿ.ಶ. ೧೧೯೯ರ ತ್ರುಟಿತ ಶಾಸನವು ಕಾಟರಸನ ಹಿರಿಮೆ, ದಾನ–ಧರ್ಮಗಳನ್ನು ನಿರೂಪಿಸುತ್ತ, ಈತನು ಜ್ವಾಲಾಮಾಲಿನಿ ಯಕ್ಷಿಯ ಆರಾಧಿಸಿ ವರವನ್ನು ಪಡೆದು ಯಶೋವಂತನಾಗಿ ನವಲಗುಂದ ಪಟ್ಟಣದಲ್ಲಿ ತ್ರಿಭುವನತಿಳಕ ಬಸದಿಯನ್ನು ಕಟ್ಟಿಸಿದನು ಎಂದು ದಾಖಲಿಸಿದೆ.[೨೭]

**ಮೊರಬದ ಘಟಾಂತಕಿ ಬಸದಿ:** ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಮೊರಬದ ಕ್ರಿ.ಶ. ಸುಮಾರು ೧೧ನೆಯ ಶತಮಾನದ ನಿಸಿಧಿ ಶಾಸನದಲ್ಲಿ ಯಾಪನೀಯ ಸಂಘದ ಕಾರೆಯಗಣದ ಮೈಳಾಪತೀರ್ಥ ಪರಂಪರೆಯ ಜಯಕೀರ್ತಿಸಿದ್ಧಾಂತದೇವನ ಶಿಷ್ಯನಾದ ನಾಗಚಂದ್ರಮುನಿಯು ಮೊರಬದ ಘಟಾಂತಕಿಯ ಬಸದಿಯಲ್ಲಿ ಕ್ರಿ.ಶ. ೧೦೫೯ರ ನವೆಂಬರ್ ೧೦ರಂದು ಸನ್ಯಸನ ವಿಧಿಯಿಂದ ಮುಡಿಪಿ ಸ್ವರ್ಗಸ್ಥನಾದನು. ಆತನ ಪರೋಕ್ಷ ವಿನಯಾರ್ಥವಾಗಿ ಆತನ ಶಿಷ್ಯ ಕನಕಶಕ್ತಿ ಸಿದ್ಧಾಂತದೇವನು ನಿಸಿದಿಕಲ್ಲನ್ನು ನಿಲ್ಲಿಸಿದನು.[೨೮] ಈ ಗ್ರಾಮದಲ್ಲಿ ಘಟಾಂತಕಿ ಎಂಬ ಹೆಸರಿನ ಬಸದಿ ಇದ್ದದ್ದು ಕಂಡುಬರುತ್ತದೆ.

**ರಾಜೂರಿನ ಬಸದಿ:** ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ರಾಜೂರಿನ ಕ್ರಿ.ಶ. ೧೧ನೆಯ ಶತಮಾನದ ಶಾಸನವು "ಮಜ್ಜನಸಾಲೆಯ ಅಧಿಷ್ಠಾಯಕ ಶ್ರೀಧರ ದಂಡನಾಥನ ಮಗ ದ್ವಿಜಕುಲೋತ್ತಮನಾದ ಮಾಳಪರಸನು ಕಟ್ಟಿಸಿದ ಬಸದಿಯ ಜೀರ್ಣೋದ್ಧಾರ, ದೇವರಂಗಭೋಗಕ್ಕೆಂದು ಗ್ರಾಮದ ಪಶ್ಚಿಮಕ್ಕೆ ಹತ್ತು ಮತ್ತರು ಎರೆಹೊಲವನ್ನು, ಎರಡು ಕಿಸುಮತ್ತರು ಮತ್ತು ಎರಡುನೂರು ಕಮ್ಮ ಗದ್ದೆಯನ್ನು ದಾನ ನೀಡಿದಂತೆ ನಿರೂಪಿಸುತ್ತದೆ.[೨೯]

**ಗದುಗಿನ ಜಿನಭವನ:** ಗದುಗಿನ ವೀರನಾರಾಯಣ ದೇವಾಲಯದ ದಕ್ಷಿಣ ದ್ವಾರದ ಕಂಬದ ಮೇಲಿರುವ ಕ್ರಿ.ಶ. ೧೨೦೦ರ ಜೈನ ಶಾಸನವೊಂದರಲ್ಲಿ ಜೈನಧರ್ಮದ ಅನುಯಾಯಿಯಾದ ಸೋಮಲದೇವಿಯ ಮಗ ಮಹಾಪ್ರಧಾನ ಬುಧನಿಧಿ ಮಹಾದೇವ ಮಂತ್ರಿಯು ವೀರನಾರಾಯಣ ದೇವಾಲಯದ ದಕ್ಷಿಣ ದ್ವಾರದಲ್ಲಿದ್ದ ಜಿನಭವನದ ಮಹಾಮಂಟಪವನ್ನು ಜೀರ್ಣೋದ್ಧಾರ ಮಾಡಿದನೆಂದು ತಿಳಿಯುತ್ತದೆ.[೩೦] ಇದರಿಂದ ಗದುಗಿನ ವೀರನಾರಾಯಣ ದೇವಾಲಯದ ಪ್ರಾಕಾರದಲ್ಲಿ ಜಿನಭವನವಿದ್ದುದು ತಿಳಿದುಬರುತ್ತದೆ.

**ನವಲಗುಂದದ ಜ್ವಾಲಾಮಾಲಿನಿದೇವಿ ಜಿನಾಲಯ:** ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಜಾವೂರಿನ ಕ್ರಿ.ಶ. ೧೩ನೆಯ ಶತಮಾನದ ಶಾಸನದಲ್ಲಿ

"ನವಿಲುಗುಂದದ ಶ್ರೀ ಜ್ವಾಲಾಮಾಲಿನಿದೇವಿ ಬಸದಿಯ ಶ್ರೀಕಾರ್ಯಗಳಿಗೆ ಮಲ್ಲದೇವನು ಸರ್ವ್ವನಮಸ್ಯವಾಗಿ ದತ್ತಿ ಬಿಟ್ಟಿದ್ದ ಜಾವೂರು ಗ್ರಾಮವನ್ನು ಸಕಳಚಂದ್ರ ಭಟ್ಟಾರಕದೇವನ ಸನ್ನಿಧಿಯಲ್ಲಿ ಬೀಚಿಸೆಟ್ಟಿ ಪುನರ್ದತ್ತಿಯಾಗಿ ಕೊಟ್ಟನು. ಆ ಸಂದರ್ಭದ ಪರೋಕ್ಷ ವಿನಯಾರ್ಥವಾಗಿ ಜಯಕೀರ್ತಿದೇವನು ಈ ಶಿಲಾಸ್ತಂಭವನ್ನು ನಿಲ್ಲಿಸಿದನು" ಎಂದು ವಿವರಗಳಿವೆ.[೩೧] ಈ ಜ್ವಾಲಾಮಾಲಿನಿದೇವಿ ಬಸದಿಯನ್ನು ಕತ್ತಲೆಕುಲದ ಅರಸ ಕೆಂಚನು (ಕ್ರಿ.ಶ. ೮೫೦) ಕಟ್ಟಿಸಿದ್ದಾನೆ.[೩೨] ಈ ಬಸದಿಯು ಇಂದು ಉಳಿದು ಬಂದಿಲ್ಲ. ಆ ಬಸದಿಯು ನವಲಗುಂದದ ಗವಿಮಠ ಮತ್ತು ಅಜ್ಜನ ಮಠದ ಪರಿಸರದಲ್ಲಿದ್ದಂತೆ ತೋರುತ್ತದೆ. ಈ ಪರಿಸರದಲ್ಲಿ ೧೨ನೆಯ ಶತಮಾನದಿಂದೀಚೆಗೆ ನಡೆದ ಧಾರ್ಮಿಕ–ಸಾಮಾಜಿಕ ಸಂಘರ್ಷಗಳಲ್ಲಿ ಆ ಬಸದಿಗಳು ನಾಶವಾಗಿದ್ದವು. ಅದನ್ನು ದೋರಸಮುದ್ರದ ಹೊಯ್ಸಳರ ಇಮ್ಮಡಿ ವೀರಬಲ್ಲಾಳನ ಮಂತ್ರಿ ರೇಚಣ ದಂಡನಾಯಕನ ಆಪ್ತ ಮಂತ್ರಿ ಕವಡೆಯ ಬೊಪ್ಪನು ಜೀರ್ಣೋದ್ಧಾರ ಮಾಡಿಸಿದ ವಿಚಾರವು ಕೊಪ್ಪಳ ನಗರದ ಕ್ರಿ.ಶ. ೧೨೦೪ರ ಶಾಸನದಲ್ಲಿ ದಾಖಲಾಗಿದೆ.[೩೩]

**ಶಿರೂರಿನ ಕುಸುಮ ಬಸದಿ:** ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಶಿರೂರಿನ ಕ್ರಿ.ಶ. ೧೨ನೆಯ ಶತಮಾನದ ಪಾರ್ಶ್ವನಾಥ ಶಿಲ್ಪದ ಪಾದಪೀಠದ ಮೇಲಿರುವ ಶಾಸನದಲ್ಲಿ ಯಾಪನೀಯ ಸಂಘದ ವೃಕ್ಷಮೂಲಗಣ ಪರಂಪರೆಯ ಸಿರಿಯೂರದ (ಶಿರೂರು) ಕುಸುಮ ಬಸದಿಗೆ ಒರೆಯೂರದ ಕಾಳಿಸೆಟ್ಟಿ ಪಾರ್ಶ್ವಭಟ್ಟಾರಕರ (ಪಾರ್ಶ್ವನಾಥ) ಪ್ರತಿಮೆಯನ್ನು ಮಾಡಿಸಿಕೊಟ್ಟ ಪ್ರಸ್ತಾಪವಿದೆ.[೩೪]

**ವಡವಟ್ಟಿಯ ಬಂಕ ಜಿನಾಲಯ:** ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ವಡವಟ್ಟಿ ಗ್ರಾಮದ ಕ್ರಿ.ಶ. ೧೨ನೆಯ ಶತಮಾನದ ಶಾಸನದಲ್ಲಿ ಬಂಕ ಜಿನಾಲಯಕ್ಕೆ ಬಡ್ಡವಟ್ಟಿ ಗ್ರಾಮದ ಆಗ್ನೇಯ ದಿಕ್ಕಿಗಿರುವ ಗುಡ್ಡೆಯನ್ನು ಸರ್ವನಮಸ್ಯವಾಗಿ ದಾನ ನೀಡಿರುವ ಮಾಹಿತಿಯನ್ನು ನಿರೂಪಿಸುತ್ತದೆ.[೩೫] ರಾಷ್ಟ್ರಕೂಟ ಚಕ್ರವರ್ತಿ ಒಂದನೆಯ ಅಮೋಘವರ್ಷನ ದಂಡನಾಯಕನಾದ ಚಲ್ಲಕೇತನರ ಬಂಕೇಶನು ಕ್ರಿ.ಶ. ೮೬೦ರಲ್ಲಿ ನರಗುಂದ ತಾಲೂಕಿನ ಕೊಣ್ಣೂರು ಗ್ರಾಮದಲ್ಲಿ ನಿರ್ಮಿಸಿರುವ ಬಂಕ ಜಿನಾಲಯಕ್ಕೆ ಈ ಗ್ರಾಮವನ್ನು ದಾನ ನೀಡಿರುವಂತೆ ಕಾಣುತ್ತದೆ

**ಕೊಮಾರಗೊಪ್ಪದ ತ್ರಿಭುವನತಿಳಕ ಬಸದಿ:** ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಕೊಮಾರಗೊಪ್ಪ ಗ್ರಾಮದ ಕ್ರಿ.ಶ. ಸುಮಾರು ೧೨ನೆಯ ಶತಮಾನದ

ಶಾಸನದಲ್ಲಿ "ಬಾಳಚಂದ್ರಸಿದ್ಧಾಂತದೇವನ ಗುಡ್ಡಿ (ಶಿಷ್ಯೆ) ಪೆರ್ಗ್ಗಡೆ ವಾಸಿಯಣ್ಣನ ಧರ್ಮಪತ್ನಿ ಚಾಮಿಕಬ್ಬೆ ಎಂಬುವವಳು ಕತ್ತಲೆಕುಲದ ಮಹಾಸಾಮಂತ ಕಾಟರಸನು ನವಲಗುಂದದಲ್ಲಿ ಕಟ್ಟಿಸಿದ್ದ ತ್ರಿಭುವನತಿಳಕ ಬಸದಿಯ ಮುನಿಸಮುದಾಯದ ಆಹಾರದಾನಕ್ಕೆ ಹದಿನೈದು ಗದ್ಯಾಣ ನಾಣ್ಯಗಳನ್ನು ದಾನ ಮಾಡಿದಳು" ಎಂಬ ನಿರೂಪಣೆಯಿದೆ.[೩೬] ಅದನ್ನು ದೋರಸಮುದ್ರದ ಹೊಯ್ಸಳರ ಇಮ್ಮಡಿ ವೀರಬಲ್ಲಾಳನ ಮಂತ್ರಿ ರೇಚಣ ದಂಡನಾಯಕನ ಆಪ್ತ ಮಂತ್ರಿ ಕವಡೆಯ ಬೊಪ್ಪನು ಜೀರ್ಣೋದ್ಧಾರ ಮಾಡಿಸಿದ ವಿಚಾರವು ಕೊಪ್ಪಳ ನಗರದ ಕ್ರಿ.ಶ. ೧೨೦೪ರ ಶಾಸನದಲ್ಲಿ ದಾಖಲಾಗಿದೆ.[೩೭]

**ಹೆಬಸೂರಿನ ಆದಿನಾಥ ಬಸದಿ:** ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿನ ಹೆಬಸೂರು ಗ್ರಾಮದ ಆದಿನಾಥ ಶಿಲ್ಪದ ಸಿಂಹಪೀಠದ ಮೇಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ "ಶ್ರೀ ಮೂಲಸಂಘದ ದೇವಗಣ ಪರಂಪರೆಯ ಶ್ರೀ ಸಂಖದೇವರ ಪ್ರತಿಬದ್ಧ" ಎಂದು ನಿರೂಪಣೆಯಿದೆ.[೩೮]

**ಮುನವಳ್ಳಿಯ ಬಸದಿ:** ಸವದತ್ತಿ ತಾಲೂಕಿನ ಮುನವಳ್ಳಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ನಿಸಿದಿ ಶಾಸನದಲ್ಲಿ ಸಿರಿಯಾದೇವಿ ನಿರ್ಮಿಸಿದ್ದ ಬಸದಿಯ ಪ್ರಸ್ತಾಪವಿದೆ.[೩೯] ಯಾಪನೀಯ ಸಂಘದ ಮುನಿಚಂದ್ರದೇವನು ಈ ಬಸದಿಯ ಸ್ಥಾನಾಚಾರ್ಯನಾಗಿದ್ದನು.

**ಭದ್ರಾಪುರದ ಜಿನಾಲಯ:** ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಭದ್ರಾಪುರ ಗ್ರಾಮದ ನಜೀರ್ ಅಹ್ಮದ ಅಬ್ದುಲ್‌ಗಣಿ ಇಸ್ಮಾಯಲ್ಲನ್ನವರ ಸರ್ವೇ ನಂ. ೧೯ರ ಹೊಲದಲ್ಲಿರುವ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಶಾಸನದಲ್ಲಿ ಮಹಿಳೆಯೊಬ್ಬಳು ಬಸದಿಯನ್ನು ನಿರ್ಮಿಸಿದ ಪ್ರಸ್ತಾಪವಿದೆ.[೪೦]

**ಅಣ್ಣಿಗೇರಿಯ ಬ್ರಹ್ಮಯ್ಯನ ಬಸದಿ:** ಅಣ್ಣಿಗೇರಿಯ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಶಾಸನದಲ್ಲಿ ಅಮೃತೇಶ್ವರ ದೇವಾಲಯಕ್ಕೆ ದಾನ ಮಾಡಿದ ಭೂಮಿಯ ಸೀಮಾ ವಿವರಗಳಲ್ಲಿ ಬ್ರಹ್ಮಯ್ಯನ ಬಸದಿಯವರು ಅರವತ್ತು ಮತ್ತರು ಭೂಮಿಯಲ್ಲಿ ಒಂಭತ್ತು ಮತ್ತರು ಭೂಮಿಯನ್ನು ದಾನ ಮಾಡಿದ ನಿರೂಪಣೆಯಿದೆ.[೪೧]

**ಅಣ್ಣಿಗೇರಿಯ ಬಸದಿ:** ಅಣ್ಣಿಗೇರಿಯ ಪೇಟೆ ಓಣಿಯಲ್ಲಿರುವ ತೋಂಟದಾರ್ಯ ಮಠದ ಆವರಣದಲ್ಲಿನ ವೀರಭದ್ರ ದೇವಾಲಯದ ಕುಂಬಿಯಲ್ಲಿರುವ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಶಾಸನದಲ್ಲಿ ಜಿನಿಸೆಟ್ಟಿಯ ಸೊಸೆ ಚಾಮವ್ವೆ,

ಬಿಯಗ (ಭಾವ) ಕಲ್ಲಿಸೆಟ್ಟಿ, ಮಗ ಚಂದಿಸೆಟ್ಟಿ, ಮದವಳಿಗೆ (ಧರ್ಮಪತ್ನಿ) ಆಚವ್ವೆ ಕೂಡಿಕೊಂಡು ಅಶೇಷನಗರದ ದೇವರ ಸನ್ನಿಧಿಯಲ್ಲಿ ಈ ಬಸದಿಯೊಳಗೆ ದೇವರ ನಿತ್ಯಪೂಜೆಗೆ ಅಂಗಡಿ ಮತ್ತು ಎರಡು ಮನೆಗಳನ್ನು ದಾನ ಮಾಡಿದ ವಿವರವಿದೆ.[೪೨]

**ಅಣ್ಣಿಗೇರಿಯ ಚಂದ್ರನಾಥ ಬಸದಿ:** ಅಣ್ಣಿಗೇರಿಯ ಕ್ರಿ.ಶ. ಸುಮಾರು ೧೪ನೆಯ ಶತಮಾನದ ಶಾಸನದಲ್ಲಿ, ಅಣ್ಣಿಗೇರಿಯ ಚಂದ್ರನಾಥ (ಚಂದ್ರಪ್ರಭನಾಥ) ಬಸದಿಯ ಉಲ್ಲೇಖವಿದೆ.[೪೩]

**ಸಮಾರೋಪ**

ಬೆಳ್ವೊಲನಾಡಿನಲ್ಲಿ ಕ್ರಿ.ಶ. ೬ನೆಯ ಶತಮಾನದಿಂದಲೂ ಜೈನ ಬಸದಿಗಳ ನಿರ್ಮಾಣ ಮತ್ತು ಶಿಲ್ಪಗಳ ಪ್ರತಿಷ್ಠಾಪನೆ ಸಾಂಗವಾಗಿ ಬೆಳೆದು ಬಂದಿದೆ. ಇಷ್ಟು ವೈಭವ, ವೈವಿಧ್ಯಗಳನ್ನು ಮೈಗೂಡಿಸಿಕೊಂಡು ಕರ್ನಾಟಕದ ತುಂಬ ಬಸದಿಗಳು ಶತಮಾನದಿಂದ ಶತಮಾನಕ್ಕೆ ಬೆಳೆಯುತ್ತಲೇ ಬಂದವು. "ಧರೆಯೆಲ್ಲಂ ಜಿನನಾಥ ಮಂದಿರಮಯ" ಎಂಬಂತೆ ಇವುಗಳ ಸಂಖ್ಯೆ ವರ್ಧಿಸಿತು. ಆದರೆ ರಾಷ್ಟ್ರಕೂಟ–ಗಂಗ ಮನೆತನಗಳ ನಾಶದೊಂದಿಗೆ ಜೈನಮತ ಇಳಿಮುಖವಾಗ ತೊಡಗಿತು. ಹೊಯ್ಸಳರ ಕಾಲದಲ್ಲಿ ಗಂಗರೂ, ಹುಳ್ಳ ಮೊದಲಾದವರು ಎಷ್ಟೇ ಪ್ರಯತ್ನಿಸಿದರೂ ಅದಕ್ಕೆ ಮೊದಲಿನ ಮೇಲ್ಮುಖ ಪ್ರಾಪ್ತವಾಗಲೇ ಇಲ್ಲ. ಮತೀಯ ಸಂಘರ್ಷದಲ್ಲಿ ಕರ್ನಾಟಕದಲ್ಲಿ ಅನ್ಯಧರ್ಮೀಯ ದೇವಾಲಯಗಳಿಗಿಂತ ಜೈನ ಬಸದಿಗಳೇ ಹೆಚ್ಚು ನಾಶವಾದವು. ಅಂದರೆ ಬಸದಿಗಳು ನಿರ್ಮಾಣವಾದುದು ಹೆಚ್ಚು ನಾಶವಾದುದು ಹೆಚ್ಚು. ಜೈನರು ವೈಷ್ಣವರ ದಾಳಿಗೆ ಸೋತು, 'ಬ್ರಹ್ಮಜಿನಾಲಯ'ವೆಂದೂ, ಶೈವರ ದಾಳಿಗೆ ಸೋತು 'ಎಕ್ಕೋಟಿ ಜಿನಾಲಯ'ವೆಂದೂ ತಮ್ಮ ಬಸದಿಗಳನ್ನು ಮರುನಾಮಕರಣಗೊಳಿಸಿಕೊಂಡರು. ಬಹಳಷ್ಟು ಸಲ ಇದನ್ನೂ ಮೀರಿ ಕೆಲವು ಬಸದಿಗಳು ವೈಷ್ಣವ, ಶೈವ ದೇವಾಲಯಗಳಾದವು ಇವುಗಳಿಗೆ ಈ ನಾಡಿನ ಬಸದಿಗಳು ಉತ್ತಮ ನಿದರ್ಶನಗಳಾಗಿವೆ.

**ಕೊನೆ ಟಿಪ್ಪಣಿ:**


೧. ಪುಟ್ಟಸ್ವಾಮಿ ಡಿ., ಜೈನ ತತ್ವಸಾರ ಸಂಗ್ರಹ (೧೯೬೫), ಪು. ३४–३६.

೨. ಪಾಡಿಗಾರ ಶ್ರೀನಿವಾಸ, ಭಾರತೀಯ ವಾಸ್ತುಶಿಲ್ಪಕ್ಕೆ ಜೈನರ ಕೊಡುಗೆ, ಜಿನತಿಲಕ, ಶಿವಾನಂದ ಗಾಳಿ ಮತ್ತು ಶ್ರೀಧರ ಹೆಗಡೆ ಭದ್ರನ್ (ಸಂ.), ಪು. ೧೦೪–೧೧೪.

೩. ಗೋಪಾಲ್ ಬಾ. ರಾ., ಬನವಾಸಿ ಕದಂಬರು, ಶಾ.ಸಂ. ೨೪.

೪. ಹಂಪ ನಾಗರಾಜಯ್ಯ, ಶಾಸನಗಳಲ್ಲಿ ಜೈನ ತೀರ್ಥಗಳು, ಚಂದ್ರಕೊಡೆ, ಪು. ೬೨–೬೩.

೫. ಎಸ್.ಆಯ್.ಆಯ್. ಸಂ. ೧೧–೧, ಶಾ.ಸಂ. ೫.

೬. ಎಸ್.ಆಯ್.ಆಯ್. ಸಂ–೧೧ ಶಾ.ಸಂ.೩೪.

೭. ಗೋಗಿ ಹನುಮಾಕಿ. (ಸಂ.), ಲಕ್ಷ್ಮೇಶ್ವರ: ಸಾಂಸ್ಕೃತಿಕ ಅಧ್ಯಯನ, ಶಾ.ಸಂ. ೧೭, ಪು. ೨೮–೩೦.

೮. ಹಂಪ ನಾಗರಾಜಯ್ಯ, ಶಾಸನಗಳಲ್ಲಿ ಬಸದಿಗಳು, ಪು. ೨೬–೨೭.

೯. ಹಂಪ ನಾಗರಾಜಯ್ಯ, ಕರ್ನಾಟಕದಲ್ಲಿ ಜೈನಧರ್ಮ: ಹೊಸ ಶೋಧಗಳು, ಅರವಂಟಿಗೆ ಸಂ. ೧/೧ (ಮೇ–೧೯೯೯), ಪು. ೬೮.

೧೦. ಎಸ್.ಆಯ್.ಆಯ್. ಸಂ.೧೧–೧, ಶಾ.ಸಂ. ೫೨.

೧೧. ಕಲಬುರ್ಗಿ ಎಂ. ಎಂ. (ಸಂ.), ಧಾರವಾಡ ಜಿಲ್ಲೆಯ ಶಾಸನ ಸೂಚಿ, ಶಾ.ಸಂ. ೫೩, ಪು. ೫.

೧೨. ಹಾಜವಗೋಳ ಧನವಂತ, ಮುಳಗುಂದ ನಾಡು ಒಂದು ಅಧ್ಯಯನ, ಶಾ.ಸಂ. ೭, ಪು. ೩೭೩.

೧೩. ಇ.ಆಯ್. ಸಂ.೧೫, ಶಾ.ಸ. ೨೩/ಬಿ.

೧೪. ಅದೇ, ಶಾ.ಸಂ. ೨೩/ಎ

೧೫. ಅದೇ, ಶಾ.ಸಂ. ೨೩/ಬಿ.

೧೬. ಅದೇ, ಶಾ.ಸಂ. ೨೩/ಎ.

೧೭. ಅದೇ, ಶಾ.ಸಂ. ೨೩/ಬಿ.

೧೮. ಅದೇ, ಶಾ.ಸಂ. ೨೩/ಎ.

೧೯. ಎಸ್.ಆಯ್.ಆಯ್.೧೮; ಬಿ.ಕೆ ನಂ.೭೭ ಆಫ್ ೧೯೩೩–೩೪.

೨೦. ಎಸ್.ಆಯ್.ಆಯ್. ೧೧; ಬಿ.ಕೆ ನಂ.೧೯೭ ಆಫ್ ೧೯೨೬–೨೭.

೨೧. ಎ.ಆರ್.ಆಯ್.ಇ-೧೯೪೦–೪೧, ಪುಟ-೭೬.

೨೨. ಎಸ್.ಆಯ್.ಆಯ್. ಸಂ–೧೫, ಶಾ.ಸಂ–೨೨.

೨೩. ಎಸ್.ಆಯ್.ಆಯ್. ಸಂ–೧೫, ಶಾ.ಸಂ–೧೨೮.

೨೪. ಎಸ್.ಆಯ್.ಆಯ್. ಸಂ.೧೫, ಶಾ.ಸಂ. ೫೯.

೨೫. ಎಸ್.ಆಯ್.ಆಯ್. ಸಂ.೧೫, ಶಾ.ಸಂ. ೬೭.

೨೬. ಎಸ್.ಆಯ್.ಆಯ್. ಸಂ.೧೫, ಶಾ.ಸಂ. ೬೭.

೨೭. ಎಸ್.ಆಯ್.ಆಯ್. ಸಂ.೧೧-೧, ಶಾ.ಸಂ. ೪೫.

೨೮. ಎಸ್.ಆಯ್.ಆಯ್. ಸಂ.೧೫, ಶಾ.ಸಂ. ೫೩೦.

೨೯. ಕ.ವಿ.ಶಾ.ಸಂ.೨, ಶಾ.ಸಂ. ೭೦, ಕ. ಜೈ. ಶಾ. ಸಂ-೫, ಶಾ.ಸಂ. ೯೭, ಪು. ೧೨೭-೧೨೮.

೩೦. ಎಸ್.ಆಯ್.ಆಯ್. ೧೮, ಶಾ.ಸಂ. ೩೭೨.

೩೧. ಎಸ್.ಆಯ್.ಆಯ್. ಸಂ.೧೫, ಶಾ.ಸಂ. ೬೩೭.

೩೨. ಎಸ್.ಆಯ್.ಆಯ್. ಸಂ.೧೧-೧, ಶಾ.ಸಂ. ೪೫.

೩೩. ಕ.ವಿ.ಶಾ.ಸಂ.೨, ಶಾ.ಸಂ. ೧೨೬, ಪು. ೧೨೪-೧೨೬.

೩೪. ಎಸ್.ಆಯ್.ಆಯ್. ಸಂ.೧೮, ಶಾ.ಸಂ. ೩೨೫.

೩೫. ಕ.ವಿ.ಶಾ.ಸಂ.೯ ಬಾದಾಮಿ. ೨೧, ಕ. ಜೈ. ಶಾ. ಸಂ-೫, ಶಾ.ಸಂ-೨೨೪, ಪು. ೩೩೭

೩೬. ಎಸ್.ಆಯ್.ಆಯ್. ಸಂ.೧೫, ಶಾ.ಸಂ. ೫೮೭.

೩೭. ಕ.ವಿ.ಶಾ.ಸಂ. ೨, ಶಾ.ಸಂ. ೧೨೬, ಪು. ೧೨೪-೧೨೬.

೩೮. ಹಂಜೆ ಅಪ್ಪಣ್ಣ ಎನ್., ಹುಬ್ಬಳ್ಳಿ ತಾಲೂಕಿನ ಜೈನಾವಶೇಷಗಳು, ಪು. ೧೬.

೩೯. ಎ.ಆರ್.ಎಸ್.ಆಯ್.ಇ, ೧೯೪೦-೪೧, ಶಾ.ಸಂ. ೬೩, ಪು. ೨೪೫.

೪೦. ಕಲಬುರ್ಗಿ ಎಂ.ಎಂ. (ಸಂ.), ಧಾರವಾಡ ಜಿಲ್ಲಾ ಶಾಸನ ಸೂಚಿ, ಶಾ.ಸಂ. ೫೫, ಪು. ೨೨.

೪೧. ಎಸ್.ಆಯ್.ಆಯ್. ಸಂ.೧೫, ಶಾ.ಸಂ. ೧೯೪.

೪೨. ಗೋಗಿ ಹನುಮಾಕ್ಷಿ, ಅಣ್ಣಿಗೇರಿಯಲ್ಲಿ ದೊರೆತ ಹೊಸ ಶಾಸನಗಳು, ಅನುಶಾಸನ, ಪು. ೧೮೦.

೪೩. ಹಂಜೆ ಅಪ್ಪಣ್ಣ ಎನ್., ನವಲಗುಂದ ತಾಲೂಕಿನ ಜೈನಾವಶೇಷಗಳು, ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೧೬-೧೮.